

## ಕೇಸರಿ ಇರುವೆ

ಈ ಕೇಸರಿ ಇರುವೆಗಳನ್ನು ದೂರದಿಂದ ನೋಡಿದರೆ ಯಾವುದೋ ಹೂಗಳು ಬಿದ್ದಿರುವಂತೆ ಕಾಣುತ್ತವೆ. ಪ್ರತಿ ವರ್ಷ ಬೇಸಿಗೆಯಲ್ಲಿ ಕೇವಲ ಒಂದು ತುಂತುರು ಮಳೆಯಾದರೂ ಸಾಕು, ಮಾರನೇ ದಿನವೇ ಅಂಟುವಾಳದ ಮರದ ಬುಡದಲ್ಲಿ ಈ ಕೇಸರಿ ಕೀಟಗಳ ದಂಡು ಪ್ರತ್ಯಕ್ಷ! ಈ ಸಹಸ್ರಾರು ಕೀಟಗಳು ಅಲ್ಲಿಯವರೆಗೆ ಎಲ್ಲಿ ಇರ್ತಾವೋ, ಅಷ್ಟು ಬೇಗ ಯಾವ ಜಾಡನ್ನು ಅರಸಿ ಇಲ್ಲಿಗೆ ಬರ್ತಾವೋ ಎಂಬುದನ್ನು ಕೀಟ ತಜ್ಞರೇ ಹೇಳ್ಬೇಕು. ಈ ಕೀಟಗಳ ಹೆಸರು ಗೊತ್ತಿರದ ನಾನೇ ಇವಕ್ಕೆ ಕೇಸರಿ ಇರುವೆ ಎಂದು ನಾಮಕರಣ ಮಾಡಿದ್ದೇನೆ. ಒಂದು ಅಂಟುವಾಳದ ಕಾಯಿ ಬಿದ್ದು ಒಣಗಿದರೂ ಸಾಕು, ನೂರಾರು ಕೇಸರಿ ಕೀಟಗಳು ಅದಕ್ಕೆ ಮುತ್ತಿಗೆ ಹಾಕಿರುತ್ತವೆ. ಮತ್ತಿವು ಅಲ್ಲಿ ಓಡಾಡುವ ಜನರಿಗಾಗಲಿ , ಸಾಕು ಪ್ರಾಣಿಗಳಿಗಾಗಲೀ ಕಚ್ಚುವುದಿಲ್ಲ! ಬಹಳ ವರ್ಷದಿಂದ ಈ ವಿಸ್ಮಯವನ್ನು ನೋಡುತ್ತಾ ಬಂದ ನನಗೆ ಇದೊಂದು ಪ್ರಕೃತಿಯ ಸೋಜಿಗದ ನಡೆಯಾಗಿ ಗೋಚರಿಸುತ್ತದೆ.

**-ಹಾದಿಗಲ್ಲು ಸರಸ್ವತಿ ರಾಘವೇಂದ್ರ, ತೀರ್ಥಹಳ್ಳಿ**

## ಬೃಹತ್ ಪಾದಗಳು

ಇದು ಶ್ರೀ ಲಂಕಾದ ಕೊಲಂಬೊದಲ್ಲಿನ ನುವಾರ ಎಲಿಯ ಎಂಬ ಪರ್ವತ ಪ್ರದೇಶ ( ಹಿಲ್ ಸ್ಟೇಶನ್) ದಲ್ಲಿದೆ. ಅಲ್ಲಿರುವ ಅಶೋಕ ವಾಟಿಕಾ ಎಂಬ ಸೀತಾ– ರಾಮ– ಲಕ್ಷ್ಮಣ ದೇವಾಲಯದ ಹಿಂಭಾಗದಲ್ಲಿದೆ. ಅಲ್ಲಿನ ಅಶೋಕ ವೃಕ್ಷದ ಕೆಳಗೆ ಕುಳಿತಿದ್ದ ಸೀತಾಮಾತೆಯನ್ನು ಕಂಡ ಹನುಮಂತನು ಬಂಡೆಯ ಮೇಲೆ ಹಾರಿ ಬಂದಾಗ ಆ ಬಂಡೆಯಲ್ಲಿ ಹನುಮನ ಬೃಹತ್ ಪಾದಗಳ ಅಚ್ಚು ಒಡಮೂಡಿದವು ಎಂಬ ಪ್ರತೀತಿ ಅಲ್ಲಿದೆ.

**- ಎಸ್.ವಿಜಯ ಗುರುರಾಜ, ಬೆಂಗಳೂರು**





## ಎಮ್ಮೆಯ ಬಣ್ಣ ಬದಲು

ನಮಗೆಲ್ಲ ಗೊತ್ತಿದೆ. ಕಾಗೆ ಬಣ್ಣ ಬದಲಾಯಿಸಲು ಆಗೊಲ್ಲ ಎಂದು. ಆದರೆ ಎಮ್ಮೆ ಬಣ್ಣ ಬದಲಾಯಿಸಬಹುದು ಎಂಬುದಕ್ಕೆ ಇಲ್ಲಿದೆ ಸಾಕ್ಷಿ. ದಾವಣಗೆರೆ ನಗರದಲ್ಲಿ ಒಂದು ಗಲ್ಲಿಯಲ್ಲಿ ಎಮ್ಮೆಯನ್ನು ಕೊಟ್ಟಿಗೆಯಲ್ಲಿ ಕೂಡಿ ಹಾಕಿ ಬಣ್ಣ ಬದಲಾಯಿಸಿದ್ದಾರೆ. ಇದರ ದೇಹಕ್ಕೆ ಬಿಸಿಲು ಬೀಳದೆ ಚರ್ಮ ಬಿಳಚಿಕೊಂಡು ಈ ರೀತಿ ಬಣ್ಣ ಬದಲಾಗಿದೆಯಂತೆ.

**-ಗಣೇಶ್ ಸಿ.ದುರ್ಗ, ಚಿತ್ರದುರ್ಗ**